

# ಮೈಕ್ರೋಫೈನ್ಯಾಕ್ಸ್ ಪಲ್ಸ್

ವಾಲ್ ೧೧- ಜನವರಿ ೨೦೨೨

# ಅನಲಿಟಿಕಲ್ ಕಾಂಟ್ಯಾಕ್ಟ್ಸ

## Equifax


ಕಿರಣ್ ಸಮುದ್ರಲ

ವಿ ಪಿ - ಅನಲಿಟಿಕ್ಸ್

kiran.samudrala@equifax.com

ಶ್ರುತಿ ಜೋಷಿ
ಎವಿಪಿ - ಅನಲಿಟಿಕ್ಸ್

shruti.joshi@equifax.com

ವಂದನಾ ಪಾಂಚಾಲ್

ಸೀನಿಯರ್ ಎಗ್ಸಿಕ್ಯುಟಿವ್
- ಅನಲಿಟಿಕ್ಸ್
vandana.panchal@equifax.com


## SIDBI


ಕೈಲಾಶ್ ಚಂದರ್ ಭಾನೂ, ಸಿಜಿಎಂ-
ಸಿಎಸ್&ಆರ್ ವಿ - ಇಆರ್ ಡಿಎ

erdav@sidbi.in

ರಂಗದಾಸ್ ಪ್ರಭಾವತಿ
ಡಿಜಿಎಂ- ಸಿಎಸ್&ಆರ್ ವಿ - ಇಆರ್ ಡಿಎ
erdav@sidbi.in

ರಮೇಶ್ ಕುಮಾರ್ ಎ ಎಂ -- ಸಿಎಸ್&ಆರ್ ವಿ -
ಇಆರ್ ಡಿಎ

rameshk@sidbi.in

# ಪರಿವಿಡಿ


| | |
|---|---|
| ಕಾರ್ಯಪಾಲಕ ಸಾರಾಂಶ | 04 |
| ಸಂಕ್ಷೇಪಣ ಮತ್ತು ಪದಕೋಶ | 05 |
| ಅತಿ ಸಣ್ಣ ಹಣಕಾಸು ಉದ್ದಿಮೆಯ ಅವಲೋಕನ | 06 |
| ವಿತರಣಾ ಪ್ರವೃತ್ತಿ | 09 |
| ಉದ್ದಿಮೆಯ ಅಪಾಯ ಚಿತ್ರಣ | 12 |
| ಭೌಗೋಲಿಕ ಅನಾವರಣ | 14 |
| ಮಧ್ಯ ಪ್ರದೇಶ ರಾಜ್ಯ ಸಮಗ್ರ ಚಿತ್ರಣ | 17 |
| ಮಹತ್ವಾಕಾಂಕ್ಷೆಯ ಜಿಲ್ಲೆಗಳು | 22 |
| ವರ್ಷದಿಂದ ವರ್ಷಕ್ಕೆ ಅತಿ ಸಣ್ಣ ಹಣಕಾಸು ಸಂಸ್ಥೆಗಳ | 24 |

# ಕಾರ್ಯಪಾಲಕ ಸಾರಾಂಶ

ಎಂ ಎಫ್ ಐ ಪಲ್ಸ್ ನ ೧೧ನೇ ಆವೃತ್ತಿಯು ಸೆಪ್ಟೆಂಬರ್ ೨೦೨೧ರವರೆಗಿನ ಕಾಲಘಟ್ಟದ ಚಿತ್ರಣವನ್ನೂ , ಆ ಸಮಯದಲ್ಲಿ ಅತಿ ಸಣ್ಣ ಹಣಕಾಸು ಉದ್ದಿಮೆಯ ಕ್ಷೇತ್ರದಲ್ಲಿನ ಬೆಳವಣಿಗೆಯನ್ನೂ ವಿವರವಾಗಿ ಬಿಡಿಸಿಡುತ್ತದೆ.

೩೦ ಸೆಪ್ಟೆಂಬರ್ ೨೦೨೧ರ ವೇಳೆಗೆ ಅತಿ ಸಣ್ಣ ಹಣಕಾಸು ಉದ್ದಿಮೆಯ ಗಾತ್ರವು ರೂ. ೨೨೯೧೨೩ ಕೋಟಿಗಳಷ್ಟಿತ್ತು. ಈ ಮೊತ್ತದಲ್ಲಿ ಬ್ಯಾಂಕುಗಳು, ಎಸ್ ಎಫ್ ಬಿ ಮತ್ತು ಎನ್ ಬಿ ಎಫ್ ಸಿ - ಎಂ ಎಫ್ ಐ ಗಳು ಶೇಕಡಾ ೯೦ಕ್ಕಿಂತ ಹೆಚ್ಚಿನ ಕೊಡುಗೆಯನ್ನು ಪೋರ್ಟ್ ಫೋಲಿಯೋ ಮೊತ್ತದ ರೂಪದಲ್ಲಿ ನೀಡಿದ್ದರೆ, ಶೇಕಡಾ ೯೫ರಷ್ಟನ್ನು ವಿತರಿಸಿದ ಮೊತ್ತದ ಮೂಲಕ ನೀಡಿವೆ. ಅತಿ ಸಣ್ಣ ಹಣಕಾಸು ಸಂಸ್ಥೆಗಳ ಉದ್ದಿಮೆಯು ಅತಿ ಹೆಚ್ಚಿನ ವೈ ಓ ವೈ (ವರ್ಷದಿಂದ ವರ್ಷಕ್ಕೆ) ಬೆಳವಣಿಗೆ, ಅಂದರೆ ಸೆಪ್ಟೆಂಬರ್ ೨೦೨೦ರಿಂದ ಸೆಪ್ಟೆಂಬರ್ ೨೦೨೧ರವರೆಗೆ  ಶೇಕಡಾ ೧೮ರಷ್ಟು ಮತ್ತು ಕ್ಯು ಓ ಕ್ಯು (ತ್ರೈಮಾಸಿಕ) ಬೆಳವಣಿಗೆ, ಅಂದರೆ ಜೂನ್ ೨೦೨೧ರಿಂದ ಸೆಪ್ಟೆಂಬರ್ ೨೦೨೧ರವರೆಗೆ ಶೇಕಡಾ ೧೧ರಷ್ಟನ್ನು ಸಾಕ್ಷೀಕರಿಸಿಕೊಂಡಿದೆ. ಜೂನ್ ೨೦೨೧ರಿಂದ ಸೆಪ್ಟೆಂಬರ್ ೨೦೨೧ರವರೆಗೆ ಬ್ಯಾಂಕುಗಳ ಪೋರ್ಟ್ ಫೋಲಿಯೋ ಮೊತ್ತವು ಶೇಕಡಾ ೩ರಷ್ಟು ಇಳಿಕೆ ಕಂಡಿದೆ.

ಜೆ ಎ ಎಸ್ '೨೦ ರಿಂದ ಜೆ ಎ ಎಸ್ '೨೧ ರವರೆಗಿನ ಅವಧಿಯಲ್ಲಿ ವಿತರಣೆಗೊಂಡ ಸಾಲಗಳ ಸಂಖ್ಯೆಯಲ್ಲಿ ಶೇಕಡಾ ೯೪ರಷ್ಟು ಹೆಚ್ಚಳವಾಗಿದೆಯಲ್ಲದೆ ಅದೇ ಅವಧಿಯಲ್ಲಿ ವಿತರಣೆಗೊಂಡ ಸಾಲದ ಮೊತ್ತವು ಶೇಕಡಾ ೯೭ರಷ್ಟು ಏರಿಕೆಯಾಗಿದೆ. ಎಲ್ಲ ತ್ರೈಮಾಸಿಕಗಲ್ಲಿಯೂ ೩೦೦೦೦ದಿಂದ ೪೦೦೦೦ ಟಿಕೆಟ್ ಗಾತ್ರದ ಶ್ರೇಣಿಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಾಲ ನೀಡಲಾಗಿದೆ. ಜೆ ಎ ಎಸ್ "೨೦ರಿಂದ ಜೆ ಎ ಎಸ್ '೨೧ ರ ಅವಧಿಯಲ್ಲಿ ಸರಾಸರಿ ಟಿಕೆಟ್ ಗಾತ್ರವು ಶೇಕಡಾ ೧ರಷ್ಟು ಏರಿಕೆಯಾಗಿದೆ.

ಸೆಪ್ಟೆಂಬರ್ ೨೦೨೧ರಿಂದ ಜೂನ್ ೨೦೨೧ರವರೆಗೆ ಎಲ್ಲ ಡೆಲಿಕ್ವೆನ್ಸಿ ಬಕೇಟುಗಳಲ್ಲಿಯೂ ಇಳಿಕೆ ಕಂಡಿದೆ. ಜೂನ್ ತ್ರೈಮಾಸಿಕವನ್ನು ಹೊರತುಪಡಿಸಿ ಎಲ್ಲ ತ್ರೈಮಾಸಿಕಗಲ್ಲಿಯೂ ೬೦-೮೯ರ ಡೆಲಿಕ್ವೆನ್ಸಿ ಬಕೆಟಿನಲ್ಲಿ ಅತಿ ಕಡಿಮೆ ಡೆಲಿಕ್ವೆನ್ಸಿಯು ದಾಖಲಾಗಿದೆ.

ರೂ. ೨೯೩೩೫ ಕೋಟಿಗಳಷ್ಟು, ಅಂದರೆ ಒಟ್ಟು ಮೊತ್ತದ ಶೇಕಡಾ ೧೩ರಷ್ಟು ಪೋರ್ಟ್ ಫೋಲಿಯೋ ಮೊತ್ತವನ್ನು ಹೊಂದಿರುವ ತಮಿಳುನಾಡು ಎಲ್ಲಕ್ಕಿಂತ ಮುಂದಿದೆ. ೩೦ ಸೆಪ್ಟೆಂಬರ್ ೨೦೨೧ರ ವೇಳೆಗೆ ತಮಿಳುನಾಡು, ಪಶ್ಚಿಮ ಬಂಗಾಳ, ಬಿಹಾರ, ಕರ್ನಾಟಕ ಮತ್ತು ಉತ್ತರ ಪ್ರದೇಶ- ಈ ಐದು ರಾಜ್ಯಗಳು ಎಲ್ಲಕ್ಕಿಂತ ಮುಂದಿದ್ದವು. ಈ ಐದು ರಾಜ್ಯಗಳಲ್ಲಿ ಕೇವಲ ಪಶ್ಚಿಮ ಬಂಗಾಳ ರಾಜ್ಯವೊಂದರ ೯೦+ ಡೆಲಿಕ್ವೆನ್ಸಿಯು ಇಡೀ ಉದ್ದಿಮೆಯದಕ್ಕಿಂತ ಹೆಚ್ಚಿದೆ.

ಮಧ್ಯ ಪ್ರದೇಶ ರಾಜ್ಯದ ಸಮಗ್ರ ಚಿತ್ರಣವನ್ನು ಇಲ್ಲಿ ನೀಡಲಾಗಿದೆ.  ೩೦ ಸೆಪ್ಟೆಂಬರ್ ೨೦೨೧ರಲ್ಲಿ ಮಧ್ಯ ಪ್ರದೇಶದ ಪೋರ್ಟ್ ಫೋಲಿಯೋ ಮೊತ್ತವು ರೂ.೧೩೯೨೦ ಕೋಟಿಗಳು. ಪೋರ್ಟ್ ಫೋಲಿಯೋ ಮೊತ್ತದೆಡೆಗಿನ ಅತಿ ಹೆಚ್ಚಿನ ಕೊಡುಗೆ ಮೊದಲು ಎನ್ ಬಿ ಎಫ್ ಸಿ-ಎಂ ಎಫ್ ಐ ಗಳದು, ನಂತರ ಬ್ಯಾಂಕುಗಳದು. ಜೆ ಎ ಎಸ್ '೨೧ರಲ್ಲಿ ಮಧ್ಯ ಪ್ರದೇಶ ರಾಜ್ಯದಲ್ಲಿ ರೂ.೪೩೪೦ ಕೋಟಿಗಳಷ್ಟು ಸಾಲವನ್ನು ವಿತರಿಸಲಾಗಿತ್ತು. ಎನ್ ಬಿ ಎಫ್ ಸಿ ಮತ್ತು ಬ್ಯಾಂಕುಗಳ ಸರಾಸರಿ ಟಿಕೆಟ್ ಗಾತ್ರವು ರಾಜ್ಯದ ಸರಾಸರಿ ಟಿಕೆಟ್ ಗಾತ್ರಕ್ಕಿಂತ ಹೆಚ್ಚಿತ್ತು. ಮಧ್ಯ ಪ್ರದೇಶ ರಾಜ್ಯದ ೯೦+ ಡೆಲಿಕ್ವೆನ್ಸಿ ಮಟ್ಟವು ಇಡೀ ಅತಿ ಸಣ್ಣ ಹಣಕಾಸು ಉದ್ದಿಮೆಯ ೯೦+ ಡೆಲಿಕ್ವೆನ್ಸಿ ಮಟ್ಟಕ್ಕಿಂತ ಹೆಚ್ಚು ಇತ್ತು.

ಈ ಆವೃತ್ತಿಯಲ್ಲಿ ನಾವು ಅತಿ ಸಣ್ಣ ಹಣಕಾಸು ಉದ್ದಿಮೆಯ ವಾರ್ಷಿಕ ಬೆಳವಣಿಗೆಯನ್ನು ನಿರ್ಣಯಿಸಿದ್ದೇವೆ. ಅತಿ ಸಣ್ಣ ಹಣಕಾಸು ಉದ್ದಿಮೆಯು ಮಾರ್ಚ್ ೨೦೨೦ರಿಂದ ಲಾಕ್ ಡೌನ್ ಕಾರಣಕ್ಕೆ ಕೊಂಚ ನಿಧಾನಗತಿಯಲ್ಲಿ ನಡೆಯುವುದನ್ನು ನೋಡಿದ್ದೇವೆ. ಅಕ್ಟೋಬರ್ ೨೦೧೮ರಿಂದ ಸೆಪ್ಟೆಂಬರ್ ೨೦೧೯ರ ಅವಧಿಗೆ ಹೋಲಿಸಿದಾಗ ಸಾಲ ನೀಡಿಕೆಯು ಸಂಖ್ಯೆಯಲ್ಲಿ ಮತ್ತು ಗಾತ್ರದಲ್ಲಿ, ಅಕ್ಟೋಬರ್ ೨೦೧೯ರಿಂದ ಸೆಪ್ಟೆಂಬರ್ ೨೦೨೦ರ ಅವಧಿಯಲ್ಲಿ ಶೇಕಡಾ ೨೮ರಿಂದ ಶೇಕಡಾ ೨೪ಕ್ಕೆ ಕುಗ್ಗಿದೆ. ಅಂತಿದ್ದರೂ, ಅತಿ ಸಣ್ಣ ಹಣಕಾಸು ಉದ್ದಿಮೆಯು ಅಕ್ಟೋಬರ್ ೨೦೨೦ರಿಂದ ಸೆಪ್ಟೆಂಬರ್ ೨೦೨೧ರ ಅವಧಿಯಲ್ಲಿ ಮತ್ತೊಮ್ಮೆ ಹಿಗ್ಗಿ, ಸಂಖ್ಯೆ ಮತ್ತು ಗಾತ್ರದಲ್ಲಿ ಶೇಕಡಾ ೩೫ರಿಂದ ಶೇಕಡಾ ೩೭ಕ್ಕೆ ಏರಿದೆ.

## ಸಂಕ್ಷೇಪಣ ಮತ್ತು ಪದಕೋಶ

- ಎ ಟಿ ಎಸ್ (ಸರಾಸರಿ ಟಿಕೆಟ್ ಗಾತ್ರ)=ವಿತರಿಸಿದ ಮೊತ್ತ / ಸಾಲಗಳ ಸಂಖ್ಯೆ
- ಡಿ ಪಿ ಡಿ =ಡೇಸ್ ಪಾಸ್ಟ್ ಡ್ಯೂ
- ಸಜೀವ ಪಿ ಓ ಎಸ್ ಅಥವಾ ಸಾಲಗಾರರು ಅಥವಾ ಚಾಲ್ತಿಯಲ್ಲಿರುವ ಸಾಲಗಳು = ೦ ಇಂದ ೧೭೯ ಡಿ ಪಿ ಡಿ + ಹೊಸ ಖಾತೆಗಳು + ಚಾಲ್ತಿ ಖಾತೆಗಳು
- ಎಂ ಎಫ್ ಐ = ಮೈಕ್ರೋ ಫೈನಾನ್ಸ್ ಸಂಸ್ಥೆ
- ಪಿ ಓ ಎಸ್ = ಪೋರ್ಟ್ ಫೋಲಿಯೋ ಮೊತ್ತ
- ಯು ಟಿ = ಯೂನಿಯನ್ ಟೆರಿಟರಿ
- ಮಹತ್ವಾಕಾಂಕ್ಷೆಯ ಜಿಲ್ಲೆಗಳು (ಎ ಡಿ)-ಜಿಲ್ಲೆಗಳು (ಪ್ರಸ್ತುತ ೧೧೭) ಸಂಯುಕ್ತ ಸೂಚ್ಯಂಕಗಳಾದ ಆರೋಗ್ಯ ಮತ್ತು ಪೋಷಣೆ, ಶಿಕ್ಷಣ, ಕೃಷಿ ಮತ್ತು ನೀರಾವರಿ, ಆರ್ಥಿಕ ಸೇರ್ಪಡೆ, ಕೌಶಲಾಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳ ಆಧಾರದ ಮೇಲೆ ಅವಲಂಬಿತವಾಗಿರುವ ಮಾನವ ಬೆಳವಣಿಗೆಯ ಸೂಚ್ಯಂಕವನ್ನು ವರ್ಧಿಸುವುದಕ್ಕಾಗಿ ಭಾರತ ಸರಕಾರದ ನೀತಿ ಆಯೋಗದಿಂದ ಜನವರಿ ೨೦೧೮ರಲ್ಲಿ ಗುರುತಿಸಲ್ಪಟ್ಟಿರುವ ಜಿಲ್ಲೆಗಳು.
- ೧-೧೭೯ = ೧ರಿಂದ ೧೭೯ ಡಿಪಿಡಿ / ಸಜೀವ ಪಿ ಓ ಎಸ್
- ೧-೨೯ = ೧ರಿಂದ ೨೯ ಡಿಪಿಡಿ/ ಸಜೀವ ಪಿ ಓ ಎಸ್
- ೩೦-೫೯ = ೩೦ರಿಂದ ೫೯ ಡಿಪಿಡಿ/ ಸಜೀವ ಪಿ ಓ ಎಸ್
- ೬೦-೮೯ = ೬೦ರಿಂದ ೮೯ ಡಿಪಿಡಿ / ಸಜೀವ ಪಿ ಓ ಎಸ್
- ೯೦-೧೭೯ = ೯೦ರಿಂದ ೧೭೯ ಡಿಪಿಡಿ / ಸಜೀವ ಪಿ ಓ ಎಸ್
- ೩೦+ಡೆಲಿಕ್ವೆನ್ಸಿ = ೩೦ರಿಂದ ೧೭೯ ಡಿಪಿಡಿ / ಸಜೀವ ಪಿ ಓ ಎಸ್
- ೯೦+ಡೆಲಿಕ್ವೆನ್ಸಿ = ೯೦ರಿಂದ ೧೭೯ ಡಿಪಿಡಿ / ಸಜೀವ ಪಿ ಓ ಎಸ್


- ಜೆ ಎ ಎಸ್ '೨೦ = ಜುಲೈ ೨೦೨೦ರಿಂದ ಸೆಪ್ಟೆಂಬರ್ ೨೦೨೦
- ಓ ಎನ್ ಡಿ'೨೦ = ಅಕ್ಟೋಬರ್ ೨೦೨೦ರಿಂದ ಡಿಸೆಂಬರ್ ೨೦೨೦
- ಜೆ ಎಫ್ ಎಂ '೨೧ = ಜನವರಿ ೨೦೨೧ರಿಂದ ಮಾರ್ಚ್ ೨೦೨೧
- ಎ ಎಂ ಜೆ '೨೧ = ಏಪ್ರಿಲ್ ೨೦೨೧ರಿಂದ ಜೂನ್ ೨೦೨೧
- ಜೆ ಎ ಎಸ್ '೨೧ = ಜುಲೈ ೨೦೨೧ರಿಂದ ಸೆಪ್ಟೆಂಬರ್ ೨೦೨೧



# ಅತಿ ಸಣ್ಣ ಹಣಕಾಸು ಉದ್ದಿಮೆಯ ಅವಲೋಕನ

# ೩೦ ಸೆಪ್ಟೆಂಬರ್ ೨೦೨೧ಕ್ಕೆ ಅತಿ ಸಣ್ಣ ಹಣಕಾಸು ಉದ್ದಿಮೆಯ ಚಿತ್ರ

| Snapshot as on 30th September 2021 | BANKS | SFBs | NBFC-MFIs | NBFCs | Not for profit MFIs | Total Industry |
|---|---|---|---|---|---|---|
| Unique Live Borrowers ('000) | 24,779 | 12,280 | 23,348 | 6,538 | 785 | 67,730 |
| Active Loans ('000) | 36,981 | 15,411 | 36,059 | 7,161 | 1,030 | 96,642 |
| Portfolio (₹ crore) | 92,725 | 36,863 | 79,932 | 14,621 | 1,982 | 226,123 |
| Disbursed Amount (₹ crore) JAS'21 | 27,439 | 12,037 | 23,838 | 2,866 | 501 | 66,681 |
| Average Ticket Size (₹) JAS'21 | 35,609 | 34,023 | 34,617 | 41,027 | 28,285 | 35,085 |
| 30+ Delinquency (POS) | 12.96% | 10.59% | 7.51% | 6.51% | 2.60% | 10.14% |
| 90+ Delinquency (POS) | 3.48% | 3.02% | 2.51% | 2.04% | 1.23% | 2.95% |




- ೩೦ ಸೆಪ್ಟೆಂಬರ್ ೨೦೨೧ಕ್ಕೆ ಅತಿ ಸಣ್ಣ ಹಣಕಾಸು ಉದ್ದಿಮೆಯ ಒಟ್ಟು ಮೊತ್ತ ರೂ.೨೨೬೧೨೩ ಕೋಟಿಗಳು.
- ಜೆ ಎ ಎಸ್'೨೧ ತ್ರೈಮಾಸಿಕದಲ್ಲಿ ಬ್ಯಾಂಕುಗಳು, ಎಸ್ ಎಫ್ ಬಿ ಮತ್ತು ಎನ್ ಬಿ ಎಫ್ ಸಿ-ಎಂ ಎಫ್ ಐಗಳು ಪೋರ್ಟ್ ಫೋಲಿಯೋ ಮೊತ್ತದ ೯೦ ಪ್ರತಿಶತದಷ್ಟು ಮತ್ತು ವಿತರಿಸಿದ ಮೊತ್ತದ ೯೫ ಪ್ರತಿಶತದಷ್ಟು ಕೊಡುಗೆ ನೀಡಿವೆ.
- ಬ್ಯಾಂಕುಗಳು ಮತ್ತು ಎನ್ ಬಿ ಎಫ್ ಸಿಗಳ ಸರಾಸರಿ ಟಿಕೆಟ್ ಗಾತ್ರವು ಇಡೀ ಉದ್ದಿಮೆಯ ಟಿಕೆಟ್ ಗಾತ್ರಕ್ಕಿಂತ ಹೆಚ್ಚು.
- ಎನ್ ಬಿ ಎಫ್ ಸಿ-ಎಂ ಎಫ್ ಐ, ಎನ್ ಬಿ ಎಫ್ ಸಿ ಮತ್ತು ಲಾಭಕ್ಕಲ್ಲದ ಎಂ ಎಫ್ ಐಗಳ ೩೦+ ಮತ್ತು ೯೦+ ಡೆಲಿಕ್ವೆನ್ಸಿಯು ಉದ್ದಿಮೆಯ ಡೆಲಿಕ್ವೆನ್ಸಿಕ್ಕಿಂತ ಕಡಿಮೆ.


**Note** : In MFI segment there are ~6 crore unique live borrowers. Di_erence in the unique number of customers is due to the customers having multiple relationships with SFBs, Banks, NBFC-MFIs, NBFCs and Not for Pro_t MFIs

# ಅತಿ ಸಣ್ಣ ಹಣಕಾಸು ಉದ್ದಿಮೆಯ ಅವಲೋಕನ

ಪೋರ್ಟ್ ಫೋಲಿಯೋ ಮೊತ್ತ

| ವಿವರಗಳು | ಸೆಪ್'೨೦ | ಡಿಸ್'೨೦ | ಮಾರ್'೨೧ | ಜೂನ್'೨೧ | ಸೆಪ್'೨೧ |
|---|---|---|---|---|---|
| ಬ್ಯಾಂಕುಗಳು | 93,409 | 96,683 | 109,867 | 95,674 | 92,725 |
| ಎಸ್ ಎಫ್ ಬಿಗಳು | 42,682 | 38,109 | 38,903 | 35,345 | 36,863 |
| ಎನ್ ಬಿ ಎಫ್ ಸಿ-ಎಂ ಎಫ್ ಐ | 70,142 | 73,166 | 79,420 | 72,856 | 79,932 |
| ಎನ್ ಬಿ ಎಫ್ ಸಿ | 19,838 | 18,988 | 18,992 | 16,140 | 14,621 |
| ಲಾಭಕ್ಕಲ್ಲದ ಎಂ ಎಫ್ ಐ | 1,772 | 1,872 | 2,095 | 2,045 | 1,982 |
| ಒಟ್ಟು ಉದ್ದಿಮೆ | 227,843 | 228,818 | 249,277 | 222,060 | 226,123 |
| Q-o-Q growth rate % | - | 0% | 9% | -11% | 2% |

ಸಾಲದಾತರ ವಿಧದನ್ವಯ ಮಾರುಕಟ್ಟೆ ಪಾಲು




- ಜೂನ್ ೨೦೨೧ ತ್ರೈಮಾಸಿಕದಿಂದ ಸೆಪ್ಟೆಂಬರ್ ೨೦೨೧ ತ್ರೈಮಾಸಿಕಕ್ಕೆ ಅತಿ ಸಣ್ಣ ಹಣಕಾಸು ಉದ್ದಿಮೆಯು 2 ಪ್ರತಿಶತ ಬೆಳವಣಿಗೆಯನ್ನು ಸಾಕ್ಷೀಕರಿಸಿದೆ.
- ಸೆಪ್ಟೆಂಬರ್ ೨೦೨೦ರಿಂದ ಸೆಪ್ಟೆಂಬರ್ ೨೦೨೧ಕ್ಕೆ ಎನ್ ಬಿ ಎಫ್ ಸಿ-ಎಂ ಎಫ್ ಐಗಳು ಅತಿ ಹೆಚ್ಚಿನ, ಅಂದರೆ ೧೪ ಪ್ರತಿಶತ ವಾರ್ಷಿಕ ಬೆಳವಣಿಗೆಗೆ ಸಾಕ್ಷಿಯಾಗಿವೆ. ಜೂನ್ ೨೦೨೧ರಿಂದ ಸೆಪ್ಟೆಂಬರ್ ೨೦೨೧ ತ್ರೈಮಾಸಿಕದಲ್ಲಿ ೧೦ ಪ್ರತಿಶತ ಬೆಳವಣಿಗೆ ಕಂಡಿವೆ.
- ಜೂನ್ ೨೦೨೧ರಿಂದ ಸೆಪ್ಟೆಂಬರ್ ೨೦೨೧ರವರೆಗೆ ಬ್ಯಾಂಕುಗಳ ಪೋರ್ಟ್ ಫೋಲಿಯೋ ಮೊತ್ತವು ೩ ಪ್ರತಿಶತ ಇಳಿಕೆಯಾಗಿದೆ.




# ವಿತರಣಾ ಪ್ರವೃತ್ತಿ

# ಸಂಸ್ಥೆಯನ್ವಯ ವಿತರಣಾ ಪ್ರವೃತ್ತಿ

ವಿತರಿತ ಸಾಲಗಳ ಸಂಖ್ಯೆ (ಲಕ್ಷಗಳಲ್ಲಿ)

| Lender Type | JAS' 20 | OND' 20 | JFM' 21 | AMJ' 21 | JAS'21 |
|---|---|---|---|---|---|
| Banks | 46 | 101 | 111 | 42 | 77 |
| SFBs | 12 | 20 | 31 | 9 | 35 |
| NBFC-MFIs | 32 | 65 | 78 | 19 | 69 |
| NBFCs | 6 | 8 | 13 | 3 | 7 |
| Not for Profit MFIs | 2 | 2 | 3 | 1 | 2 |
| Total Industry | 98 | 196 | 236 | 74 | 190 |

**Market Share Trends by Lender Type**





- ಜೆ ಎ ಎಸ್'೨೦ ಗೆ ಹೋಲಿಸಿದರೆ ಜೆ ಎ ಎಸ್'೨೧ರಲ್ಲಿ ವಿತರಿಸಲಾದ ಸಾಲಗಳ ಸಂಖ್ಯೆಯು ೯೪ ಪ್ರತಿಶತದಷ್ಟು, ಮತ್ತು ವಿತರಿಸಲಾದ ಹಣದ ಮೊತ್ತವು ೯೬ ಪ್ರತಿಶತದಷ್ಟು ಏರಿಕೆಯಾಗಿದೆ.
- ಎಲ್ಲ ತ್ರೈಮಾಸಿಕಗಳಲ್ಲೂ ಬ್ಯಾಂಕುಗಳು ಮತ್ತು ಎನ್ ಬಿ ಎಫ್ ಸಿ-ಎಂ ಎಫ್ ಐಗಳು ಅತಿ ಹೆಚ್ಚಿನ ಸಾಲ ವಿತರಿಸಿವೆ.
- ಜೆ ಎ ಎಸ್'೨೦ರಿಂದ ಜೆ ಎ ಎಸ್'೨೧ರವರೆಗೆ ವಿತರಿತ ಸಾಲಗಳ ಸಂಖ್ಯೆ ಮತ್ತು ಹಣ, ಎರಡರಲ್ಲೂ, ಎಸ್ ಎಫ್ ಬಿಗಳೇ ಅತಿ ಹೆಚ್ಚಿನ ಬೆಳವಣಿಗೆಯನ್ನು ದಾಖಲಿಸಿವೆ.

# ಉದ್ದಿಮೆಯ ಟಿಕೆಟ್ ಗಾತ್ರ ಪ್ರವೃತ್ತಿ

ವಿತರಿಸಿದ ಸಾಲ ಸಂಖ್ಯೆ (ಲಕ್ಷ)

| ಟಿಕೆಟ್ ಗಾತ್ರ | ಜೆ ಎ ಎಸ್'೨೦ | ಓ ಎನ್ ಡಿ'೨೦ | JFM'21 | AMJ'21 | JAS'21 | Y-o-Y Growth Rate |
|---|---|---|---|---|---|---|
| ೦ಕೆ-೧೦ಕೆ | 4 | 35 | 19 | 8 | 18 | 350% |
| ೧೦ಕೆ-೨೦ಕೆ | 16 | 20 | 19 | 8 | 20 | 25% |
| ೨೦ಕೆ-೩೦ಕೆ | 18 | 32 | 40 | 12 | 33 | 83% |
| ೩೦ಕೆ-೪೦ಕೆ | 24 | 44 | 60 | 17 | 47 | 96% |
| ೪೦ಕೆ-೫೦ಕೆ | 18 | 29 | 39 | 11 | 29 | 61% |
| ೫೦ಕೆ-೬೦ಕೆ | 10 | 18 | 27 | 9 | 24 | 140% |
| ೬೦ಕೆ+ | 8 | 18 | 32 | 9 | 19 | 138% |
| ಒಟ್ಟು ಮೊತ್ತ | 98 | 196 | 236 | 74 | 190 | 94% |
| ತ್ರೈಮಾಸಿಕ ಸಾಲ ವಿತರಣಾ ಬೆಳವಣಿಗೆ ದರ% | - | 100% | 20% | -69% | 157% | - |
| ಭಾರತದಾದ್ಯಂತ ಎ ಟಿ ಎಸ್ | 34,724 | 32,174 | 38,792 | 35,781 | 35,085 | - |





- ಎಲ್ಲ ತ್ರೈಮಾಸಿಕಗಳಲ್ಲೂ ೩೦ಕೆ-೪೦ಕೆ ಟಿಕೆಟ್ ಗಾತ್ರ ವಿಭಾಗದಲ್ಲಿಯೇ ಅತಿ ಹೆಚ್ಚು ಸಂಖ್ಯೆಯಲ್ಲಿ ಸಾಲಗಳನ್ನು ವಿತರಿಸಲಾಗಿದೆ.
- ೩೦ಕೆ-೫೦ಕೆ ಟಿಕೆಟ್ ಗಾತ್ರ ವಿಭಾಗದಲ್ಲಿ ಶೇಕಡಾ ೪೦ರಷ್ಟು ಸಾಲಗಳನ್ನು ನೀಡಲಾಗಿದೆ.
- ಜೆ ಎ ಎಸ್'೨೦ರಿಂದ ಜೆ ಎ ಎಸ್'೨೧ರ ಅವಧಿಯಲ್ಲಿ ಸರಾಸರಿ ಟಿಕೆಟ್ ಗಾತ್ರವು ಶೇಕಡಾ ೧೦ರಷ್ಟು ಬೆಳೆದಿದೆ.




# ಉದ್ದಿಮೆಯ ಅಪಾಯಗಳ ಚಿತ್ರಣ

# ಡೆಲಿಕ್ವೆನ್ಸಿ ಪ್ರವೃತ್ತಿಗಳು

| ತ್ರೈಮಾಸಿಕ ವರದಿ | 1-29 ಡೇಸ್ ಪಾಸ್ಟ್ ಡ್ಯೂ | 30-59 ಡೇಸ್ ಪಾಸ್ಟ್ ಡ್ಯೂ | 60-89 ಡೇಸ್ ಪಾಸ್ಟ್ ಡ್ಯೂ | 90-179 ಡೇಸ್ ಪಾಸ್ಟ್ ಡ್ಯೂ | 1-179 ಡೇಸ್ ಪಾಸ್ಟ್ ಡ್ಯೂ |
|---|---|---|---|---|---|
| ಸೆಪ್'೨೦ | 15.35% | 3.47% | 0.39% | 0.63% | 19.84% |
| ಡಿಸ್'೨೦ | 7.50% | 4.73% | 3.49% | 4.96% | 20.68% |
| ಮಾರ್'೨೧ | 4.55% | 2.90% | 2.01% | 4.12% | 13.58% |
| ಜೂನ್'೨೧ | 14.90% | 10.14% | 3.38% | 3.01% | 31.43% |
| ಸೆಪ್'೨೧ | 8.64% | 5.44% | 1.74% | 2.95% | 18.77% |





- ಜೂನ್ ೨೦೨೧ಕ್ಕೆ ಹೋಲಿಸಿದರೆ ಸೆಪ್ಟೆಂಬರ್ ೨೦೨೧ರಲ್ಲಿ ಎಲ್ಲ ಡೆಲಿಕ್ವೆನ್ಸಿ ಬಕೆಟುಗಳೂ ಇಳಿಕೆಯಾಗಿವೆ.
- ಜೂನ್ ೨೦೨೧ನ್ನು ಹೊರತು ಪಡಿಸಿ ಉಳಿದೆಲ್ಲ ತ್ರೈಮಾಸಿಕಗಳಲ್ಲಿಯೂ ೬೦-೮೯ ಡೇಸ್ ಪಾಸ್ಟ್ ಡ್ಯೂ ಡೆಲಿಕ್ವೆನ್ಸಿ ಬಕೇಟು ಅತಿ ಕಡಿಮೆ ಡೆಲಿಕ್ವೆನ್ಸಿ ಹೊಂದಿದೆ.




# ಭೌಗೋಳಿಕ ಅನಾವರಣ

# ೩೦ ಸೆಪ್ಟೆಂಬರ್ ೨೦೨೧ರಲ್ಲಿ ರಾಜ್ಯ/ ಕೇಂದ್ರಾಡಳಿತಪ್ರದೇಶಕ್ಕನುಗುಣವಾಗಿ ಪೋರ್ಟ್ ಫೋಲಿಯೋ ಮೊತ್ತ




- ಅತ್ಯುನ್ನತ ಮಟ್ಟದಲ್ಲಿರುವ ೧೦ ರಾಜ್ಯಗಳು ಪೋರ್ಟ್ ಫೋಲಿಯೋ ಮೊತ್ತದ ಶೇಕಡಾ ೮೨ರಷ್ಟು ಕೊಡುಗೆ ನೀಡಿವೆ.
- ರೂ.೨೯೩೩೫ ಕೋಟಿ ಪೋರ್ಟ್ ಫೋಲಿಯೋ ಮೊತ್ತವನ್ನು ಹೊಂದಿರುವ ತಮಿಳುನಾಡು ಮೊದಲನೇ ಸ್ಥಾನದಲ್ಲಿದ್ದು, ಒಟ್ಟು ಪೋರ್ಟ್ ಫೋಲಿಯೋ ಮೊತ್ತದ ಶೇಕಡಾ ೧೩ರಷ್ಟನ್ನು ಕೊಡುಗೆ ನೀಡಿದೆ.
- ೩೦ ಸೆಪ್ಟೆಂಬರ್ ೨೦೨೧ರ ವೇಳೆಗೆ ತಮಿಳುನಾಡು, ಪಶ್ಚಿಮ ಬಂಗಾಳ, ಬಿಹಾರ, ಕರ್ನಾಟಕ ಮತ್ತು ಉತ್ತರ ಪ್ರದೇಶಗಳು ಮೊದಲ ೫ ಸ್ಥಾನದಲ್ಲಿವೆ.

# ೩೦ ಸೆಪ್ಟೆಂಬರ್ ೨೦೨೧ರಲ್ಲಿ ರಾಜ್ಯ/ ಕೇಂದ್ರಾಡಳಿತಪ್ರದೇಶಕ್ಕನುಗುಣವಾಗಿ ೯೦+ ಡೆಲಿಕ್ವೆನ್ಸಿ





- ಪಶ್ಚಿಮ ಬಂಗಾಳದ ೯೦+ ಡೆಲಿಕ್ವೆನ್ಸಿಯು ಉದ್ಯಮದ ಒಟ್ಟಾರೆ ಡೆಲಿಕ್ವೆನ್ಸಿಕ್ಕಿಂತ ಹೆಚ್ಚು ಇದೆ.
- ತಮಿಳುನಾಡು, ಬಿಹಾರ, ಕರ್ನಾಟಕ ಮತ್ತು ಉತ್ತರ ಪ್ರದೇಶಗಳ ೯೦+ ಡೆಲಿಕ್ವೆನ್ಸಿಯು ಉದ್ಯಮದ ಡೆಲಿಕ್ವೆನ್ಸಿಕ್ಕಿಂತ ಕಡಿಮೆ ಇದೆ.



# ಮಧ್ಯ ಪ್ರದೇಶ ರಾಜ್ಯ ಸಮಗ್ರ ಚಿತ್ರಣ

# ಮಧ್ಯ ಪ್ರದೇಶ: ರಾಜ್ಯ ಚಿತ್ರಣ

| ೩೦ ಸೆಪ್ಟೆಂಬರ್ ೨೦೨೧ರಲ್ಲಿ ಮಧ್ಯ ಪ್ರದೇಶ ಚಿತ್ರಣ | ಬ್ಯಾಂಕುಗ | ಎಸ್ | ಎನ್ ಬಿ ಎಫ್ ಸಿ- | ಎನ್ ಬಿ | ಲಾಭಕ್ಕಲ್ಲದ ಉದ್ದಿಮೆ | ಉದ್ದಿಮೆ |
|---|---|---|---|---|---|---|
| ಚಾಲ್ತಿಯಲ್ಲಿರುವ ಸಾಲಗಳು | 1,858 | 919 | 2,800 | 408 | 51 | 6,036 |
| ಪೋರ್ಟ್ ಫೋಲಿಯೋ ಮೊತ್ತ | 4,277 | 2,236 | 6,552 | 766 | 89 | 13,920 |
| ಪೋರ್ಟ್ ಫೋಲಿಯೋ ಮೊತ್ತದಲ್ಲಿ ಮಾರುಕಟ್ಟೆ ಪಾಲು | 31% | 16% | 47% | 6% | 1% | - |
| ವಿತರಣೆ (ಕೋಟಿಗಳಲ್ಲಿ) | 1,434 | 845 | 1,920 | 114 | 27 | 4,340 |
| ಸರಾಸರಿ ಟಿಕೆಟ್ ಗಾತ್ರ ಜೆ ಎ ಎಸ್ '೨೧ | 36,006 | 33,629 | 34,638 | 41,499 | 24,795 | 34,938 |
| ೩೦+ ಡೆಲಿಕ್ವೆನ್ಸಿ (ಪಿ ಓ ಎಸ್) | 12.34% | 9.27% | 8.38% | 11.70% | 2.15% | 9.88% |
| ೯೦+ ಡೆಲಿಕ್ವೆನ್ಸಿ (ಪಿ ಓ ಎಸ್) | 3.92% | 3.56% | 2.53% | 4.44% | 0.78% | 3.22% |





- ೩೦ ಸೆಪ್ಟೆಂಬರ್ ೨೦೨೧ಕ್ಕೆ ಮಧ್ಯಪ್ರದೇಶದ ಪೋರ್ಟ್ ಫೋಲಿಯೋ ಮೊತ್ತ ರೂ.೧೩೯೨೦ ಕೋಟಿಗಳು.
- ಪೋರ್ಟ್ ಫೋಲಿಯೋ ಮೊತ್ತದೆಡೆಗೆ ಅತಿ ಹೆಚ್ಚಿನ ಕೊಡುಗೆ ಮೊದಲು ಎನ್ ಬಿ ಎಫ್ ಸಿ-ಎಂ ಎಫ್ ಐಗಳದ್ದು, ನಂತರದ್ದು ಬ್ಯಾಂಕುಗಳದ್ದು.
- ಜೆ ಎ ಎಸ್'೨೧ರಲ್ಲಿ ಮಧ್ಯ ಪ್ರದೇಶದಲ್ಲಿ ರೂ.೪೩೪೦ ಕೋಟಿಗಳಷ್ಟು ಸಾಲ ವಿತರಣೆಯಾಗಿತ್ತು.
- ರಾಜ್ಯದ ಸರಾಸರಿ ಟಿಕೆಟ್ ಗಾತ್ರಕ್ಕಿಂತ ಎನ್ ಬಿ ಎಫ್ ಸಿ ಮತ್ತು ಬ್ಯಾಂಕುಗಳ ಸರಾಸರಿ ಟಿಕೆಟ್ ಗಾತ್ರವು ಹೆಚ್ಚಿನದು.
- ಅತಿ ಸಣ್ಣ ಹಣಕಾಸು ಉದ್ದಿಮೆಯ ಒಟ್ಟಾರೆ ಡೆಲಿಕ್ವೆನ್ಸಿಕ್ಕಿಂತ ಮಧ್ಯ ಪ್ರದೇಶದ ೯೦+ ಡೆಲಿಕ್ವೆನ್ಸಿಯು ಹೆಚ್ಚಿನದು.
- ಮಧ್ಯ ಪ್ರದೇಶದ ಎಲ್ಲ ಸಾಲದಾತರಿಗಿಂತ ಲಾಭಕ್ಕಲ್ಲದ ಎಂ ಎಫ್ ಐ ಮತ್ತು ಎನ್ ಬಿ ಎಫ್ ಸಿ-ಎಂ ಎಫ್ ಐಗಳ ೯೦+ ಡೆಲಿಕ್ವೆನ್ಸಿಯು ಅತಿ ಕಡಿಮೆಯದು.

# ಮಧ್ಯ ಪ್ರದೇಶ -ಉದ್ದಿಮೆಯ ಟಿಕೆಟ್ ಗಾತ್ರ ಪ್ರವೃತ್ತಿ

ವಿತರಿಸಿದ ಸಾಲಗಳ ಸಂಖ್ಯೆ (ಸಾವಿರಗಳಲ್ಲಿ)


| Ticket Size | JAS'20 | OND'20 | JFM'21 | AMJ'21 | JAS'21 | Y-o-Y Growth Rate |
|---|---|---|---|---|---|---|
| ೦ಕೆ-೧೦ಕೆ | 22 | 124 | 106 | 39 | 99 | 350% |
| 10k-20k | 81 | 77 | 108 | 32 | 113 | 40% |
| ೨೦ಕೆ-೩೦ಕೆ | 125 | 192 | 245 | 52 | 234 | 87% |
| 30k-40k | 171 | 328 | 427 | 83 | 332 | 94% |
| ೪೦ಕೆ-೫೦ಕೆ | 122 | 196 | 270 | 51 | 193 | 58% |
| 50k-60k | 80 | 160 | 185 | 41 | 162 | 103% |
| ೬೦ಕೆ+ | 51 | 113 | 171 | 33 | 107 | 110% |
| Total | 652 | 1,190 | 1,512 | 331 | 1,240 | 90% |
| ತ್ರೈಮಾಸಿಕ ಸಾಲ ವಿತರಣಾ ದರ% | - | 83% | 27% | -78% | 275% | - |
| ಮಧ್ಯ ಪ್ರದೇಶ (ಎ ಟಿ ಎಸ್) | 35,123 | 35,410 | 37,498 | 34,747 | 34,938 | - |
| ಎ ಟಿ ಎಸ್ ತ್ರೈಮಾಸಿಕ ಬೆಳವಣಿಗೆಯ ದರ% | - | 1% | 6% | -7% | 1% | - |




- ಜೆ ಎ ಎಸ್'೨೦ರಿಂದ ಜೆ ಎ ಎಸ್'೨೧ರವರೆಗೆ ವಿತರಿಸಿದ ಸಾಲಗಳ ಸಂಖ್ಯೆಯಲ್ಲಿ ಮಧ್ಯಪ್ರದೇಶವು ಶೇಕಡಾ ೯೦ರಷ್ಟು ಬೆಳವಣಿಗೆಯನ್ನು ಕಂಡಿದೆ.
- ಶೇಕಡಾ ೬೦ಕ್ಕಿಂತಲೂ ಹೆಚ್ಚಿನ ಸಾಲಗಳು ೨೦ಕೆ-೫೦ಕೆ ಟಿಕೆಟ್ ಗಾತ್ರ ವಿಭಾಗದಲ್ಲಿಯೇ ವಿತರಿಸಲ್ಪಟ್ಟಿವೆ.
- ಮಧ್ಯಪ್ರದೇಶದ ಸರಾಸರಿ ಟಿಕೆಟ್ ಗಾತ್ರವು ಎ ಎಂ ಜೆ'೨೧ರಿಂದ ಜೆ ಎ ಎಸ್'೨೧ರವರೆಗೆ ಶೇಕಡಾ ಒಂದರಷ್ಟು ಬೆಳವಣಿಗೆಯಾಗಿದೆ.

# ಮಧ್ಯ ಪ್ರದೇಶ- ಪೋರ್ಟ್ ಫೋಲಿಯೋ ಪ್ರವೃತ್ತಿ


| ವಿವರ | ಸೆಪ್'೨೦ | ಡಿಸ್'೨೦ | ಮಾರ್'೨೧ | ಜೂನ್'೨೧ | ಸೆಪ್'೨೧ |
|---|---|---|---|---|---|
| ಬ್ಯಾಂಕುಗಳು | 4,181 | 4,358 | 5,052 | 4,291 | 4,277 |
| ಎಸ್ ಎಫ್ ಬಿ | 2,193 | 2,115 | 2,226 | 2,012 | 2,236 |
| ಎನ್ ಬಿ ಎಫ್ ಸಿ-ಎಂ ಎಫ್ ಐ | 5,381 | 5,853 | 6,552 | 5,920 | 6,552 |
| ಎನ್ ಬಿ ಎಫ್ ಸಿ | 1,164 | 1,167 | 1,093 | 861 | 766 |
| ಲಾಭಕ್ಕಲ್ಲದ ಎಂ ಎಫ್ ಐ | 66 | 74 | 83 | 84 | 89 |
| ಮಧ್ಯ ಪ್ರದೇಶ | 12,985 | 13,567 | 15,006 | 13,168 | 13,920 |
| ತ್ರೈಮಾಸಿಕ ಬೆಳವಣಿಗೆ | - | 4% | 11% | -12% | 6% |




- ಸೆಪ್ಟೆಂಬರ್ ೨೦೨೦ರಿಂದ ಸೆಪ್ಟೆಂಬರ್ ೨೦೨೧ರವರೆಗಿನ ಅವಧಿಯಲ್ಲಿ, ಪೋರ್ಟ್ ಫೋಲಿಯೋ ಮೊತ್ತದಲ್ಲಿ ಮಧ್ಯಪ್ರದೇಶವು ೭ ಪ್ರತಿಶತ ವಾರ್ಷಿಕ ಬೆಳವಣಿಗೆಯನ್ನು ದಾಖಲಿಸಿದೆ.
- ಎಲ್ಲ ತ್ರೈಮಾಸಿಕಗಳಲ್ಲಿಯೂ ಪೋರ್ಟ್ ಫೋಲಿಯೋ ಮೊತ್ತದಲ್ಲಿ ಶೇಕಡಾ ೭೦ಕ್ಕಿಂತ ಹೆಚ್ಚಿನ ಕೊಡುಗೆಯನ್ನು ಎನ್ ಬಿ ಎಫ್ ಸಿ-ಎಂ ಎಫ್ ಐ ಮತ್ತು ಬ್ಯಾಂಕುಗಳು ನೀಡಿವೆ.

# ಮಧ್ಯ ಪ್ರದೇಶ: ೯೦+ ಡೆಲಿಕ್ವೆನ್ಸಿ ಪ್ರವೃತ್ತಿ

| Lender Type | Sep' 20 | Dec' 20 | Mar' 21 | Jun' 21 | Sep' 21 |
|---|---|---|---|---|---|
| ಬ್ಯಾಂಕುಗಳು | 0.42% | 4.25% | 3.10% | 2.50% | 3.92% |
| ಎಸ್ ಎಫ್ ಬಿ | 0.20% | 4.16% | 3.26% | 2.07% | 3.56% |
| ಎನ್ ಬಿಎಫ್ ಸಿ-ಎಂ ಎಫ್ ಐ | 0.95% | 5.67% | 2.56% | 3.51% | 2.53% |
| ಎನ್ ಬಿ ಎಫ್ ಸಿ | 0.92% | 3.01% | 7.24% | 3.24% | 4.44% |
| ಲಾಭಕ್ಕಲ್ಲದ ಎಂ ಎಫ್ ಐ | 1.04% | 2.44% | 1.68% | 1.06% | 0.78% |
| ಮಧ್ಯ ಪ್ರದೇಶ | 0.65% | 4.73% | 3.18% | 2.93% | 3.22% |




- ಮಧ್ಯಪ್ರದೇಶದಲ್ಲಿ ಜೂನ್ ೨೦೨೧ರಲ್ಲಿ ಶೇಕಡಾ 2.೯೩ರಷ್ಟಿದ್ದ ೯೦+ ಡೆಲಿಕ್ವೆನ್ಸಿಯು ಸೆಪ್ಟೆಂಬರ್ ೨೦೨೧ರ ವೇಳೆಗೆ ಶೇಕಡಾ ೩.೨೨ರಷ್ಟು ಹೆಚ್ಚಳ ಕಂಡಿತು.
- ಮಾರ್ಚ್ ೨೦೨೧ರಿಂದ ಸೆಪ್ಟೆಂಬರ್ ೨೦೨೧ರ ಅವಧಿಯಲ್ಲಿ ಲಾಭಕ್ಕಲ್ಲದ ಎಂ ಎಫ್ ಐಗಳಲ್ಲಿ ೯೦+ ಡೆಲಿಕ್ವೆನ್ಸಿಯು ಇಳಿಕೆಯ ಹಾದಿ ಹಿಡಿಯಿತು.

**Note :** Delinquencies calculated basis POS




# ಮಹತ್ವಾಕಾಂಕ್ಷೆಯ ಜಿಲ್ಲೆಗಳು


# ಮಹತ್ವಾಕಾಂಕ್ಷೆಯ ಜಿಲ್ಲೆಗಳು -
# ಸೆಪ್ಟೆಂಬರ್ ೨೦೨೧ರ ಅವಲೋಕನ

ಪೋರ್ಟ್ ಫೋಲಿಯೋ (ಕೋಟಿಗಳಲ್ಲಿ)

ವಿತರಿಸಿದ ಮೊತ್ತ (ಕೋಟಿಗಳಲ್ಲಿ) -ಅಕ್ಟ್'೨೦ರಿಂದ ಸೆಪ್'೨೧




ಸಾಲದಾತರನ್ವಯ **30+** ಮತ್ತು **90+** ಪಿ ಓ ಎಸ್ ಡೆಲಿಕ್ವೆನ್ಸಿ




| Aspirational Districts Growth Particulars | December 2017 | September 2021 | Growth % |
|---|---|---|---|
| ಚಾಲ್ತಿ ಗ್ರಾಹಕರಲ್ಲಿ ತೂರಿಕೆ ('000) | 4,155 | 8,440 | 103% |
| ವಿತರಣಾ ಮೊತ್ತ (`ಕೋಟಿಗಳಲ್ಲಿ) | 14,374 * | 34,595** | 141% |
| ಚಾಲ್ತಿ ಸಾಲಗಳು ('000) | 6,925 | 13,203 | 91% |
| ಪೋರ್ಟ್ ಫೋಲಿಯೋ ಮೊತ್ತ (ಕೋಟಿಗಳಲ್ಲಿ) | 11,175 | 29,975 | 168% |
| ೩೦+ಡೆಲಿಕ್ವೆನ್ಸಿ | 1.54% | 7.47% | - |

- ೩೦ ಸೆಪ್ಟೆಂಬರ್ ವೇಳೆಗೆ ಮಹತ್ವಾಕಾಂಕ್ಷೆಯ ಜಿಲ್ಲೆಗಳಲ್ಲಿ ಪೋರ್ಟ್ ಫೋಲಿಯೋ ಮೊತ್ತವು ೨೯೯೭೫ ಕೋಟಿಗಳಷ್ಟಿದ್ದು, ಡಿಸೆಂಬರ್ ೨೦೧೭ರಿಂದ ಸೆಪ್ಟೆಂಬರ್ ೨೦೨೧ರ ಅವಧಿಯಲ್ಲಿ ಶೇಕಡಾ ೧೬೮ರಷ್ಟು ಬೆಳೆದಿದೆ.
- ಅಕ್ಟೋಬರ್ ೨೦೨೦ರಿಂದ ಸೆಪ್ಟೆಂಬರ್ ೨೦೨೧ರವರೆಗೆ ಮಹತ್ವಾಕಾಂಕ್ಷೆಯ ಜಿಲ್ಲೆಗಳಲ್ಲಿ ರೂ.೩೪೫೯೫ ಕೋಟಿಗಳಷ್ಟು ಸಾಲವನ್ನು ವಿತರಿಸಲಾಗಿದೆ.
- ಬ್ಯಾಂಕ್ ಮತ್ತು ಎಸ್ ಎಫ್ ಬಿಗಳ ೩೦+ ಮತ್ತು ೯೦+ ಡೆಲಿಕ್ವೆನ್ಸಿಯು ಎಲ್ಲ ಮಹತ್ವಾಕಾಂಕ್ಷೆಯ ಜಿಲ್ಲೆಗಳ ೩೦+ ಮತ್ತು ೯೦+ ಡೆಲಿಕ್ವೆನ್ಸಿಕ್ಕಿಂತ ಹೆಚ್ಚು ಇದೆ.

Note:*DisbursementJanuary2017toDecember2017
**DisbursementOctober2020toSeptember2021
DelinquenciesarecalculatedbasisPOS

EQUIFAX

sidbi





# ಅತಿ ಸಣ್ಣ ಹಣಕಾಸು ಉದ್ದಿಮೆಯ ವಾರ್ಷಿಕ ಬೆಳವಣಿಗೆ


## ವರ್ಷದಿಂದ ವರ್ಷಕ್ಕೆ ವಿತರಣೆಯ ಬೆಳವಣಿಗೆ

ಕೊವಿಡ್ ಪಾಂದೆಮಿಕ್ ಮತ್ತು ಚಲನಶೀಲತೆಗೆ ಉಂಟಾದ ಅಡೆತಡೆಗಳಿಂದ ಅತಿ ಸಣ್ಣ ಹಣಕಾಸು ಉದ್ದಿಮೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಅತಿ ಸಣ್ಣ ಹಣಕಾಸು ಉದ್ದಿಮೆಯ ಮೇಲೆ ಕೊವಿಡ್ ೧೯ರ ಪರಿಣಾಮವನ್ನು ಅರಿತುಕೊಳ್ಳುವ ಉದ್ದೇಶದಿಂದ ಕಳೆದ ಮೂರು ವರ್ಷಗಳ ಸಾಲದಾತರ ಮತ್ತು ರಾಜ್ಯಗಳ ಅನ್ವಯ ಸಾಲನೀಡಿಕೆ, ಪೋರ್ಟ್ ಫೋಲಿಯೋ ಮೊತ್ತ ಮತ್ತು ಡೆಲಿಕ್ವೆನ್ಸಿಗಳನ್ನು ವಿಶೇಷಿಸಲಾಗಿದೆ.

ವಿತರಿಸಲಾದ ಸಾಲಗಳು (ಲಕ್ಷಗಳಲ್ಲಿ)






ವಿತರಿಸಲಾದ ಹಣ (ಕೋಟಿಗಳಲ್ಲಿ)




- ಅತಿ ಸಣ್ಣ ಹಣಕಾಸು ಉದ್ದಿಮೆಯು ದೇಶದಲ್ಲಿ ಉಂಟಾದ ಲಾಕ್ಡೌನ್ ಪರಿಣಾಮದಿಂದ ಮಾರ್ಚ್ ೨೦೨೦ರಿಂದ ಇಳಿಕೆ ಕಂಡಿದೆ. ಅಕ್ಟೋಬರ್ ೨೦೧೯ರಿಂದ ಸೆಪ್ಟೆಂಬರ್ ೨೦೨೦ರವರೆಗೆ ಸಾಲ್ ನೀಡಿಕೆಯ ಸಂಖ್ಯೆಯಲ್ಲಿ ೨೮ ಪ್ರತಿಶತ ಹಾಗೂ ಗಾತ್ರದಲ್ಲಿ ೨೪ ಪ್ರತಿಶತ ಕುಗ್ಗುವಿಕೆ ಉಂಟಾಗಿದೆ. ಅದೇನೇ ಇದ್ದರೂ, ಅಕ್ಟೋಬರ್ ೨೦೨೦ರಿಂದ ಸೆಪ್ಟೆಂಬರ್ ೨೦೨೧ರವರೆಗಿನ ಅವಧಿಯಲ್ಲಿ ಉದ್ದಿಮೆಯು ಚೇತರಿಸಿಕೊಂಡು, ಸಂಖ್ಯೆಯಲ್ಲಿ ೩೫ ಪ್ರತಿಶತ ಹಾಗೂ ಗಾತ್ರದಲ್ಲಿ ೩೭ ಪ್ರತಿಶತ ವರ್ಧಿಸಿದೆ.
- ಅಕ್ಟೋಬರ್ ೨೦೧೮-ಸೆಪ್ಟೆಂಬರ್ ೨೦೧೯ರ ಅವಧಿಗೆ ಹೋಲಿಸಿದರೆ, ಅಕ್ಟೋಬರ್ ೨೦೧೯-ಸೆಪ್ಟೆಂಬರ್ ೨೦೨೦ರ ಅವಧಿಯಲ್ಲಿ ಎನ್ ಬಿ ಎಫ್ ಸಿಯು ಪಾಂಡೆಮಿಕ್ ನಿಂದ ದೊಡ್ಡ ಹೊಡೆತ ತಿಂದು, ಸಾಲನೀಡಿಕೆಯ ಸಂಖ್ಯೆಯಲ್ಲಿ ೪೦ ಪ್ರತಿಶತ ಹಾಗೂ ವಿತರಿಸಿದ ಮೊತ್ತದಲ್ಲಿ ೩೯ ಪ್ರತಿಶತ ಇಳಿಕೆ ಕಂಡಿದೆ.

# ವರ್ಷದಿಂದ ವರ್ಷಕ್ಕೆ ಪೋರ್ಟ್ ಫೋಲಿಯೋ ಮೊತ್ತದ ಏರಿಕೆ ಮತ್ತು ೯೦+ ಡೆಲಿಕ್ವೆನ್ಸಿ ಚಲನೆ








- ಎನ್ ಬಿ ಎಫ್ ಸಿ ಮತ್ತು ಲಾಭಕ್ಕಲ್ಲದ ಎಮ್ ಎಫ್ ಐಗಳನ್ನು ಹೊರತುಪಡಿಸಿ ಎಲ್ಲ ಸಾಲದಾತ ವಿಭಾಗಗಳೂ ಸೆಪ್ಟೆಂಬರ್ ೨೦೧೯ರಿಂದ ಸೆಪ್ಟೆಂಬರ್ ೨೦೨೧ರವರೆಗೆ ಉತ್ತಮ ಬೆಳವಣಿಗೆಯನ್ನು ದಾಖಲಿಸಿವೆ.
- ಸೆಪ್ಟೆಂಬರ್ ೨೦೨೦ ಮತ್ತು ಸೆಪ್ಟೆಂಬರ್ ೨೦೨೧ರ ಅವಧಿಯಲ್ಲಿ ಕೇವಲ ಎನ್ ಬಿ ಎಫ್ ಸಿ-ಎಂ ಎಫ್ ಐಗಳು ಮಾತ್ರ ಉತ್ತಮ ವಾರ್ಷಿಕ ಬೆಳವಣಿಗೆಯನ್ನು ದಾಖಲಿಸಿವೆ.
- ಸೆಪ್ಟೆಂಬರ್ ೨೦೧೯ರಲ್ಲಿ ಬ್ಯಾಂಕುಗಳಲ್ಲಿ ಅತಿ ಕಡಿಮೆ ೯೦+ಡೆಲಿಕ್ವೆನ್ಸಿಯಿದ್ದರೆ, ಸೆಪ್ಟೆಂಬರ್ ೨೦೨೧ರಲ್ಲಿ ಅತಿ ಹೆಚ್ಚಿನ ಡೆಲಿಕ್ವೆನ್ಸಿಯು ಕಂಡು ಬಂದಿದೆ.
- ಸೆಪ್ಟೆಂಬರ್ ೨೦೧೯ ಮತ್ತು ಸೆಪ್ಟೆಂಬರ್ ೨೦೨೦ಕ್ಕೆ ಹೋಲಿಸಿದಲ್ಲಿ ಸೆಪ್ಟೆಂಬರ್ ೨೦೨೧ರಲ್ಲಿ ಎಲ್ಲ ಸಾಲದಾತರಲ್ಲೂ ೯೦+ ಡೆಲಿಕ್ವೆನ್ಸಿಯಲ್ಲಿ ಹೆಚ್ಚಳ ಕಂಡು ಬಂದಿತು.

# ಮೊದಲ ಹತ್ತು ರಾಜ್ಯಗಳ ವಾರ್ಷಿಕ ಪೋರ್ಟ್ ಫೋಲಿಯೋ ಮೊತ್ತ

| Top 10 States | ಸೆಪ್'೧೯ Sep' 19 (POS ₹crore) | ೨೦೧೯ರಲ್ಲಿ ಸ್ಥಾನ | ಸೆಪ್'೨೦ (POS ₹crore) | ಸ್ಥಾನ 2020 | ಸೆಪ್'೨೧ | ೨೦೨೧ರಲ್ಲಿ ಸ್ಥಾನ |
|---|---|---|---|---|---|---|
| ತಮಿಳುನಾಡು | 29,383 | 1 | 33,708 | 1 | 29,335 | 1 |
| ಪಶ್ಚಿಮ ಬಂಗಾಳ | 28,661 | 2 | 33,560 | 2 | 27,932 | 2 |
| ಬಿಹಾರ | 20,938 | 3 | 24,838 | 3 | 26,791 | 3 |
| ಕರ್ನಾಟಕ | 17,244 | 4 | 17,982 | 4 | 19,566 | 4 |
| ಮಹಾರಾಷ್ಟ್ರ | 13,742 | 5 | 16,717 | 5 | 16,276 | 6 ↓ |
| ಅಸ್ಸಾಂ | 12,508 | 6 | 11,805 | 9 ↓ | 7,007 | 10 ↓ |
| ಉತ್ತರ ಪ್ರದೇಶ | 12,334 | 7 | 14,397 | 6 ↑ | 17,898 | 5 ↑ |
| ಒಡಿಷಾ | 11,213 | 8 | 12,557 | 8 | 13,882 | 8 |
| ಮಧ್ಯಪ್ರದೇಶ | 11,213 | 9 | 12,985 | 7 ↑ | 13,920 | 7 ↑ |
| ಕೇರಳ | 8,042 | 10 | 9,271 | 10 | 9,302 | 9 ↑ |

ಮೊದಲ ೧೦ ರಾಜ್ಯಗಳ ೯೦+ ಡೆಲಿಕ್ವೆನ್ಸಿ




- ತಮಿಳುನಾಡು, ಪಶ್ಚಿಮ ಬಂಗಾಳ, ಬಿಹಾರ, ಕರ್ನಾಟಕ ಮತ್ತು ಒಡಿಷಾಗಳು ಮುನ್ನಿನ ಸ್ಥಾನವನ್ನು ಕಾಯ್ದುಕೊಂಡಿವೆ.
- ಸೆಪ್ಟೆಂಬರ್ ೨೦೧೯ರಲ್ಲಿ ೬ನೆಯ ಸ್ಥಾನದಲ್ಲಿದ್ದ ಅಸ್ಸಾಂ, ಸೆಪ್ಟೆಂಬರ್ ೨೦೨೦ರಲ್ಲಿ ೯ನೆಯ ಸ್ಥಾನವನ್ನೂ, ಸೆಪ್ಟೆಂಬರ್ ೨೦೨೧ರಲ್ಲಿ ೧೦ನೆಯ ಸ್ಥಾನವನ್ನೂ ಹೊಂದಿದೆ.
- ಸೆಪ್ಟೆಂಬರ್ ೨೦೧೯ರಿಂದ ಸೆಪ್ಟೆಂಬರ್ ೨೦೨೦ಕ್ಕೆ ಮಧ್ಯ ಪ್ರದೇಶವು ೭ನೆಯ ಸ್ಥಾನಕ್ಕೆ ಚಲಿಸಿ, ೨೦೨೧ರಲ್ಲಿ ಅದೇ ಸ್ಥಾನದಲ್ಲಿ ಉಳಿದಿದೆ.
- ಎಲ್ಲ ರಾಜ್ಯಗಳ ೯೦+ ಡೆಲಿಕ್ವೆನ್ಸಿಯು ಸೆಪ್ಟೆಂಬರ್ ೨೦೧೯ರಿಂದ ಸೆಪ್ಟೆಂಬರ್ ೨೦೨೧ರ ಅವಧಿಯಲ್ಲಿ ಏರಿಕೆಯಾಗಿದೆ.

**Note** : Top 10 States identified basis September 2019 POS
90+ delinquency for September 2020 and September 2021 is compared with September 2019.
If90+delinquencyishigherthantheSeptember2019thenthestateiscoloredinRedotherwiseGreen.

# ಸಿಡ್ಬಿಯ ಬಗ್ಗೆ:

ಸಿಡ್ಬಿ, ಅಥವಾ ಸಣ್ಣ ಉದ್ದಿಮೆಗಳ ಬೆಳವಣಿಗೆಗಾಗಿ ಸ್ಥಾಪಿಸಲಾದ ಭಾರತೀಯ ಬ್ಯಾಂಕ್, ಪಾರ್ಲಿಮೆಂಟಿನ ಅನುಚ್ಛೇದದ ಕೆಳಗೆ, ೧೯೯೦ರಲ್ಲಿ ಸ್ಥಾಪಿತವಾಯಿತು. ಸಿಡ್ಬಿಯು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ವರ್ಗದ ಉದ್ದಿಮೆಗಳ ಉದ್ಧಾರ, ಧನಸಹಾಯ ಮತ್ತು ಬೆಳವಣಿಗೆ ಎಂಬ ಮೂರು ಮುಖ್ಯ ಉದ್ದೇಶಗಳಿಗಾಗಿ ಸ್ಥಾಪಿತವಾದ, ಮತ್ತು ಅಂಥದೇ ಚಟುವಟಿಕೆ ಹೊಂದಿದ ಸಂಸ್ಥೆಗಳಲ್ಲಿ ಸಾಮರಸ್ಯ ತರುವುದನ್ನು ಮುಖ್ಯ ಗುರಿಯಾಗಿ ಹೊಂದಿದ ಸಂಸ್ಥೆ. ಕಾಲಾನಂತರದಲ್ಲಿ ಸಿಡ್ಬಿಯು ತನ್ನ ವಿವಿಧ ಆರ್ಥಿಕ ಮತ್ತು ಅಭಿವೃದ್ಧಿ ಚಟುವಟಿಕೆಗಳಿಂದ ದೇಶದ ಮೂಲೆಮೂಲೆಗಳಲ್ಲಿಯೂ ಜನರ ಜೀವನವನ್ನು ಸುಧಾರಿಸಿದೆ; ಇಡಿಯ ಎಂಎಸ್ಎಂಇ ಜಾಲದ ಮೇಲೆ ತನ್ನ ಪ್ರಭಾವವನ್ನು ಬೀರಿದೆ; ಅಷ್ಟೇ ಅಲ್ಲದೆ, ಎಂಎಸ್ಎಂಇ ಪರಿಸರದಲ್ಲಿ ಅನೇಕ ನಂಬಲರ್ಹ ಸಂಸ್ಥೆಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿದೆ.

ಎಂಎಸ್ಎಂಇ ಜಾಲದಲ್ಲಿನ ಮಾಹಿತಿ ಕೊರತೆಗಳನ್ನು ನೀಗಲು ಸಿಡ್ಬಿಯು ವಿಷನ್2.೦ ಅಡಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಎಂಎಸ್ಎಂಇ ಪಲ್ಸ್ ಕೂಡ ಒಂದು. ಈ ಪುಸ್ತಕವು, ಎಂಎಸ್ಎಂಇಗಳ, ಕ್ರಿಸಿದೆಕ್ಸ್ ನ ಆರೋಗ್ಯದ ಮೇಲೆ ಕಣ್ಣಿಡುತ್ತ, ಸಾಲದಾತರು, ಸಂಸ್ಥೆಗಳು ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುತ್ತ, ಎಂಎಸ್ಇ ನಾಡಿಯನ್ನು ಅಳೆಯುತ್ತ ಸಂಸ್ಥೆಗಳ ಮಹತ್ವಾಕಾಂಕ್ಷೆಯನ್ನು ಸರಿಯಾಗಿ ಅರ್ಥೈಸಿಕೊಂಡಿದೆ.

# ಅತಿ ಸಣ್ಣ ಉದ್ದಿಮೆಯಲ್ಲಿ ಸಿಡ್ಬಿ

ಅತಿ ಸಣ್ಣ ಉದ್ದಿಮೆಯ ಚಳವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿರುವ ಸಿಡ್ಬಿಯು ಸಂಸ್ಥೆಗಳಿಗೆ ಧನ ಸಹಾಯ ನೀಡುವ ವಿಷಯದಲ್ಲಿ ದಾಪುಗಾಲಿಟ್ಟಿದೆ. ಮಾರ್ಚ್ ೩೧, ೨೦೨೧ರವರೆಗೆ ಬ್ಯಾಂಕಿನ ವತಿಯಿಂದ ಅತಿ ಸಣ್ಣ ಉದ್ದಿಮೆಗಳಿಗೆ ನೀಡಲಾದ ಒಟ್ಟು ಸಾಲ ರೂ.೨೦೫೬೮ ಕೋಟಿಗಳು.ಇದರಿಂದ ಸಹಾಯ ಪಡೆದ ಒಟ್ಟು ಘಟಕಗಳ ಸಂಖ್ಯೆ ಸುಮಾರು ನಾಲ್ಕು ಕೋಟಿ. ಸಾಲ ಮತ್ತು ಈಕ್ವಿಟಿ ಸಹಾಯವು ಈ ಘಟಕಗಳಿಗೆ ಉತ್ತಮ ಬೆಂಬಲ ನೀಡಿದ್ದಲ್ಲದೆ ಅವುಗಳ ಸಾಮರ್ಥ್ಯ ಹೆಚ್ಚಲು, ಅವುಗಳಲ್ಲಿ ಕಾರ್ಪೊರೇಟ್ ಆಡಳಿತ ಮೈಗೂಡಲು ಕೂಡ ತನ್ನ ಕಂಪ್ಲೈಯನ್ಸ್ ಅಸೆಸ್ಮೆಂಟ್ ಟೂಲ್ಸ್ ಮುಂತಾದವುಗಳಿಂದ ಸಹಕಾರ ನೀಡಿದೆ. ಆಗಷ್ಟೇ ಹುಟ್ಟಿದ ಎಳೆಯ ಕಂದಮ್ಮಗಳಂಥ ಘಟಕಗಳನ್ನು ದಷ್ಟಪುಷ್ಟವಾಗಿ ಬೆಳೆದು ತನ್ನ ಕಾಲ ಮೇಲೆ ತಾನು ನಿಲ್ಲುವಂಥ ಉದ್ದಿಮೆಗಳನ್ನಗಿ ರೂಪಿಸಿದ್ದಲ್ಲದೆ, ನಮ್ಮ ೮ ಪಾರ್ಟ್ನರ್ ಮೈಕ್ರೋ ಫೈನಾನ್ಸ್ ಇಂಡಸ್ಟ್ರಿಗಳನ್ನು ಎಸ್ಎಫ್ ಬಿ/ಯೂನಿವರ್ಸಲ್ ಬ್ಯಾಂಕುಗಳನ್ನಾಗಿ ಪರಿವರ್ತಿಸಲೂ ನೆರವಾಗಿದ್ದೇವೆ. ಇದಲ್ಲದೆ ನಾವು ಹಿಡಿದ ಹೊಸ ಹಾದಿಯು ಏನೆಂದರೆ ಅತಿ ಸಣ್ಣ ಉದ್ದಿಮೆಗಳಿಗೆ ನಮ್ಮ ಪಾಲುದಾರ ಸಂಸ್ಥೆಗಳೊಡನೆ ಮಾಡಿಕೊಂಡ ಒಪ್ಪಂದದ ಮೂಲಕ ನೇರವಾಗಿ ಸಾಲ ನೀಡುವುದು. ಈ ಸಣ್ಣ ಟಿಕೆಟ್ ಗಾತ್ರದ ಸಾಲವನ್ನು ಸುಮಾರು ೫೦೦೦೦ ರೂಪಾಯಿಗಳಿಂದ ೫ ಲಕ್ಷ ರೂಪಾಯಿಗಳವರೆಗೂ ಪಾಲುದಾರ ಸಂಸ್ಥೆಗಳ ಜೊತೆ ಕೈಗೂಡಿಸಿ ನೀಡಲಾಗುವುದು. ಅತಿ ಮುಖ್ಯವಾಗಿ ಮಾರುಕಟ್ಟೆ ದರಕ್ಕಿಂತ ಸಾಕಷ್ಟು ಕಡಿಮೆ ಬಡ್ಡಿ ದರದಲ್ಲಿ ನೀಡುವುದರಿಂದ ಪಿರಮಿಡ್ಡಿನ ಬುಡದಲ್ಲಿರುವ ಘಟಕಗಳನ್ನು ಸಶಕ್ತಗೊಳಿಸುವುದು ಸಾಧ್ಯವಾಗುತ್ತಿದೆ.

## ಈಕ್ವಿಫ್ಯಾಕ್ಸ್ ಬಗ್ಗೆ

ಈಕ್ವಿಫ್ಯಾಕ್ಸ್ ಒಂದು ಜಾಗತಿಕ ಮಾಹಿತಿ ಸಂಗ್ರಹ ಸಂಸ್ಥೆ. ಈ ಸಂಸ್ಥೆಯು ತನ್ನ ನಂಬಿಕೆಗೆ ಅರ್ಹವಾದ ಮಾಹಿತಿ ಸಂಗ್ರಹವನ್ನು ಹೊಸ ರೀತಿಯ ವಿಶ್ಲೇಷಣೆ, ಹೊಸ ತಂತ್ರಜ್ಞಾನ, ಉದ್ಯಮ ಪರಿಣತಿಗಳನ್ನು ಬಳಸಿಕೊಂಡು ಜಾಗತಿಕವಾಗಿ ಸಂಸ್ಥೆಗಳನ್ನೂ, ವ್ಯಕ್ತಿಗಳನ್ನೂ ತನ್ನ ವಿಶ್ಲೇಷಣಾತ್ಮಕ ಮಾಹಿತಿ ನೀಡಿ ಸಶಕ್ತರನ್ನಗಿ ಮಾಡುತ್ತಿದೆ. ಈ ಮಾಹಿತಿ ಮತ್ತು ವಿಶ್ಲೇಷಣೆಯ ನೆರವಿನಿಂದ ಉದ್ದಿಮೆಗಳು ತಮ್ಮ ವ್ಯವಹಾರದಲ್ಲಿ ಹೆಚ್ಚು ಮಾಹಿತಿಪೂರ್ಣವಾದ ಮತ್ತು ಯುಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿದೆ.

ಅಟ್ಲಾಂಟದಲ್ಲಿ ತನ್ನ ಪ್ರಧಾನ ಕಛೇರಿಯನ್ನು ಹೊಂದಿರುವ ಈಕ್ವಿಫ್ಯಾಕ್ಸ್ ಉತ್ತರ ಅಮೇರಿಕಾ, ಮಧ್ಯ ಮತ್ತು ದಕ್ಷಿಣ ಅಮೇರಿಕಾ, ಯೂರೋಪ್ ಮತ್ತು ಏಷ್ಯಾ ಪೆಸಿಫಿಕ್ ಭೂಭಾಗದಲ್ಲಿರುವ ೨೪ ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ ಅಥವಾ ಬಂಡವಾಳ ಹೂಡಿದೆ. ಸ್ಟ್ಯಾಂಡರ್ಡ್ ಮತ್ತು ಪೂರ್ಸ್ (ಎಸ್ ಅಂಡ್ ಪಿ) ಸಂಸ್ಥೆಯ ಸದಸ್ಯನಾಗಿರುವ ಇದು ತನ್ನ ಶೇರುಗಳನ್ನು ನ್ಯೂಯಾರ್ಕ್ ಸ್ಟಾಕ್ ಎಕ್ಸ್ಚೇಂಜ್ ಮೂಲಕ ಟ್ರೇಡ್ ಮಾಡುತ್ತಿದೆ. ಈ ಶೇರುಗಳ ಸಂಕೇತ ನಾಮ ಇಎಫ್ಎಕ್ಸ್. ಈಕ್ವಿಫ್ಯಾಕ್ಸ್ ಪ್ರಪಂಚದಾದ್ಯಂತ ೧೧೦೦೦ ಸಿಬ್ಬಂದಿಯನ್ನು ಹೊಂದಿದೆ. ೧೨೦ ವರ್ಷಗಳ ಜಾಗತಿಕ ಇತಿಹಾಸ ಹೊಂದಿರುವ ಈ ಸಂಸ್ಥೆಯು ೨೦೧೦ರಲ್ಲಿ ಭಾರತದಲ್ಲಿ ತನ್ನ ಶಾಖೆಯನ್ನು ತೆರೆಯಿತು. ಸಿಐಸಿ ಆಗಿ ಕಾರ್ಯ ನಿರ್ವಹಿಸಲು ಆರ್ ಬಿ ಐನಿಂದ ಲೈಸೆನ್ಸ್ ಪಡೆಯಿತು. ಕಳೆದ ೯ ವರ್ಷಗಳಲ್ಲಿ ಈ ಸಂಸ್ಥೆಯು ೪೦೦೦ಕ್ಕಿಂತಲೂ ಅಧಿಕ ಗ್ರಾಹಕರನ್ನು ಸಂಪಾದಿಸಿಕೊಂಡಿದ್ದು, ಅದರಲ್ಲಿ ಬ್ಯಾಂಕುಗಳು, ಅತಿ ಸಣ್ಣ ಉದ್ದಿಮೆಗಳು, ಇನ್ಸೂರೆನ್ಸ್ ಮತ್ತು ಎಸ್ ಎಫ್ ಬಿ ಗಳು ಸೇರಿವೆ. ಈ ಗ್ರಾಹಕ ಸದಸ್ಯರು ತಮ್ಮ ಲಕ್ಷಾಂತರ ಭಾರತೀಯ ಗ್ರಾಹಕರ ದೆಮೊಗ್ರಫಿಕ್ ಡೇಟಾ ಮತ್ತು ಸಾಲ ವಸೂಲಾತಿಯ ವಿವರಗಳನ್ನು ನೀಡುತ್ತ ಬಂದಿವೆ. ೨೦೧೪ರಲ್ಲಿ ಈಕ್ವಿಫ್ಯಾಕ್ಸ್ ಒಂದು ಅನಲಿಟಿಕ್ಸ್ ಸಂಸ್ಥೆಯನ್ನು ಸ್ವಾಧೀನ ಪಡಿಸಿಕೊಂಡು ತನ್ನ ಹೆಜ್ಜೆ ಗುರುತುಗಳನ್ನು ಭಾರತದ ನೆಲದಲ್ಲಿ ಮೂಡಿಸಿತು. ಈಕ್ವಿಫ್ಯಾಕ್ಸ್ ಅನಲಿಟಿಕ್ಸ್ ಸಂಸ್ಥೆಯು ಸಂಪೂರ್ಣವಾಗಿ ಈಕ್ವಿಫ್ಯಾಕ್ಸ್ ನ ಸ್ವಾಧೀನದಲ್ಲಿದ್ದು, ಭಾರತದಲ್ಲಿ ಒಂದು ವಿಶ್ಲೇಷಣಾ ಸಂಸ್ಥೆಯಾಗಿದೆ. ಈ ಸಂಸ್ಥೆಯು ತನ್ನ ಸಾಟಿಯಿಲ್ಲದ ಸೇವೆಯ ಮೂಲಕ ಅಸಂಖ್ಯಾತ ಸಂಸ್ಥೆಗಳಿಗೂ, ಅದರ ಗ್ರಾಹಕರಿಗೂ ಏಕಕಾಲದಲ್ಲಿ ಉನ್ನತಿ ಹೊಂದಲು ಕಾರಣಕರ್ತನಾಗಿದೆ.

**Disclaimer**

TheMicrofinancePulse(Report)ispreparedbyEquifaxCreditInformationServicesPvtLtd(Equifax).Byaccessingandusingthe report, the user acknowledges and accepts that such use is subject to this disclaimer. This Report is based on collation of informationsubstantiallyprovidedbyMicrofinanceinstitutionsasofSeptember2021andwhoaremembersofEquifax.While EquifaxtakesreasonablecareinpreparingtheReport,itshallnotberesponsibleforaccuracy,errorsand/oromissionscaused by inaccurate or inadequate information submitted by Microfinance institutions. Further, Equifax does not guarantee the adequacy or completeness of the information in the Report and/or its suitability for any specific purpose nor is Equifax responsibleforanyaccessorrelianceontheReportandthatEquifaxexpresslydisclaimsallsuchliability.ThisReportisnota recommendationforrejection/denialoracceptanceofanyapplication,productnoranyrecommendationbyEquifaxto(i)lend or not to lend and (ii) enter into or not to enter into any financial transaction with the concerned individual/entity. The information contained in the Report does not constitute advice and the user should carry out all necessary analysis that is prudent in its opinion before taking any decision based on the Information contained in this Report. The use of the Report is governed by the provisions of the Credit Information Companies (Regulation) Act 2005, the Credit Information Companies Regulations, 2006, Credit Information Companies Rules, 2006. No part of the Report should be copied, circulated, published without priorapprovals.

## CONTACT DETAILS

**Equifax Credit Information Services Private Limited**

Unit No. 931, 3rd Floor, Building No. 9,
Solitaire Corporate Park, Andheri Ghatkopar Link Road,
Andheri (East), Mumbai - 400 093

Toll Free No.: 1800 2093247
ecissupport@equifax.com

**Small Industries Development Bank of India**

Swavalamban Bhavan, Plot No. C-11, 'G' Block,
Bandra Kurla Complex, Bandra (East),
Mumbai - 400 051 Maharashtra

Toll Free No.: 1800 226753
www.sidbi.in/en

Copyright © 2022, Equifax Inc., Atlanta, Georgia. All rights reserved. Equifax is a registered trademarks of Equifax Inc.